# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1287 |
| ಉತ್ತರಿಸುವ ದಿನಾಂಕ | 19-03-2025 |
| ಮಾನ್ಯ ಸದಸ್ಯರ ಹೆಸರು | ಡಾ: ಎಂ.ಜಿ.ಮುಳೆ (ವಿಧಾನಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಕಂದಾಯ ಇಲಾಖೆಯ ಸಬ್ ರಿಜಿಸ್ಟರ್ ಕಛೇರಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾವೇರಿ-2 ತಂತ್ರಾಂಶವು ಜನಸ್ನೇಹಿ ತಂತ್ರಾಂಶವಾಗಿರುವುದರಿಂದ ಉಪ ನೋಂದಣಿ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. |
| ಆ) | ದಲ್ಲಾಳಿಗಳ ಮೂಲಕ ಅಕ್ರಮವಾಗಿ ಹಣ ವಸೂಲಿ ಮಾಡಿ ಅಧಿಕಾರಿಗಳು ಅವ್ಯವಹಾರಗಳನ್ನು ನಡೆಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಮುಖವಾಗಿ Anywhere registration ನೋಂದಣಿ ಜಾರಿಗೆ ತಂದಿದ್ದು, ಜಿಲ್ಲೆಯಾದ್ಯಂತ ಯಾವುದೇ ಉಪನೋಂದಣಿ ಕಛೇರಿಯಲ್ಲಿ ಸಾರ್ವಜನಿಕರು ತಮ್ಮ ದಸ್ತಾವೇಜುಗಳನ್ನು ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪುವುದು.<br><br>ಪ್ರಸ್ತುತ ಆಸ್ತಿಗಳ ನೋಂದಣಿಯು ಕಾವೇರಿ 2 ತಂತ್ರಾಂಶವು ಜನಸ್ನೇಹಿ ತಂತ್ರಾಂಶವಾಗಿರುವುದರಿಂದ ಇಲ್ಲಿ ಸಾರ್ವಜನಿಕರು ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ನೋಂದಣಿ ಇಲಾಖೆಯ ಸೇವೆಗಳನ್ನು ಪಡೆಯಬಹುದಾಗಿದೆ. ನೋಂದಣಿ ಸೇವೆಗಳ ಕುರಿತು ಹೆಲ್ಪ್‌ಡೆಸ್ಕ್ ಫೋನ್ ನಂ.080 68265316 ಇ-ಮೇಲ್ ಐಡಿ helpdsr.karnataka.gov.in ಇದ್ದು ಸಾರ್ವಜನಿಕರು ಕಾವೇರಿ ತಂತ್ರಾಂಶದ ಮೂಲಕ ವಿವಿಧ ಸೇವೆಗಳಾದ ಋಣಭಾರ ಪ್ರಮಾಣ ಪತ್ರ, ದೃಢೀಕೃತ ಪ್ರಮಾಣ ಪತ್ರ, ವಿವಾಹ ನೋಂದಣಿ ಮತ್ತು ಇತರೆ ಸೇವೆಗಳನ್ನು ಸಹ ಪಡೆಯಬಹುದಾಗಿದೆ ಮತ್ತು ಈ ಎಲ್ಲಾ ನೋಂದಣಿ ಪ್ರಕ್ರಿಯೆಗಳನ್ನು ನಿರ್ವಹಣೆ ಮಾಡುವ ಬಗ್ಗೆ ನೋಂದಣಿ ಇಲಾಖೆಯು ಯು-ಟ್ಯೂಬ್ ಚಾನಲ್‌ಗಳನ್ನು ಫೇಸ್‌ಬುಕ್, ಟ್ವಿಟರ್ ಮುಂತಾದ ಡಿಜಿಟಲ್ ಪ್ಲಾಟ್ ಫಾರ್ಮನಲ್ಲಿ ಇರುವುದರಿಂದ ಸಾರ್ವಜನಿಕರು ನೋಂದಣಿ ಸೇವೆಯನ್ನು ಸ್ವತಃ ಪಡೆಯಬಹುದಾಗಿದ್ದರಿಂದ ಮಧ್ಯವರ್ತಿಗಳ ಅವಶ್ಯಕತೆ ಇರುವುದಿಲ್ಲ. |

. . . 2

| | | |
|---|---|---|
| ಇ) | ಸಬ್ ರಿಜಿಸ್ಟರ್ ಕಛೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ರಾಜ್ಯಾದ್ಯಂತ Anywhere registration ಜಾರಿಗೆ ತಂದಿದ್ದು, ಜಿಲ್ಲೆಯಾದ್ಯಂತ ಯಾವುದೇ ಉಪನೋಂದಣಿ ಕಛೇರಿಯಲ್ಲಿ ಸಾರ್ವಜನಿಕರು ತಮ್ಮ ದಸ್ತಾವೇಜುಗಳನ್ನು ನೋಂದಣಿ ಮಾಡಿಕೊಳ್ಳಲು ಅವಕಾಶವಿರುವುದರಿಂದ, ಇಲಾಖೆಯಲ್ಲಿ ಕಾವೇರಿ-2 ತಂತ್ರಾಂಶದ ಮೂಲಕ ಈ ಕೆಳಕಂಡ ಆನ್‌ಲೈನ್ ಸೇವೆಗಳನ್ನು ನೀಡಲಾಗುತ್ತಿದೆ.<br>1. ಸ್ಥಿರಾಸ್ತಿಗಳ ಋಣಭಾರ ಪ್ರಮಾಣ ಪತ್ರ/ ನೋಂದಾಯಿತ ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿ ಪೂರೈಸುವಿಕೆ.<br>2. ಸ್ಥಿರಾಸ್ತಿಗಳ ಮೌಲ್ಯ ಮತ್ತು ಮುದ್ರಾಂಕ ಶುಲ್ಕಗಳ ಲೆಕ್ಕ ಹಾಕುವಿಕೆ.<br>3. ಸಾರ್ವಜನಿಕರಿಂದ ನೋಂದಣಿ ಪೂರ್ವ ಡೇಟಾ ಎಂಟ್ರಿ.<br>4. ದಸ್ತಾವೇಜಿನ ನೋಂದಣಿಗೆ ಮುಂಗಡ ಸಮಯ ನಿಗಧಿಪಡಿಸುವಿಕೆ (Appointment Booking)<br>5. ಉಪನೋಂದಣಿ ಕಛೇರಿಯ ಗುರುತಿಸುವಿಕೆ<br>6. ವಿವಾಹ ನೋಂದಣಿಯ ಪ್ರಮಾಣ ಪತ್ರ.<br>7. ಮೌಲ್ಯ ಮೊಬೈಲ್ ಆಪ್ ಅಭಿವೃದ್ಧಿಪಡಿಸಿದ್ದು, ಇದರಿಂದ ಸಾರ್ವಜನಿಕರು ಸ್ಥಿರಾಸ್ತಿಗಳ ಮಾರ್ಗಸೂಚಿ ಮೌಲ್ಯಗಳನ್ನು ತಿಳಿಯಬಹುದಾಗಿದೆ.<br>8. KACOMP ಕಾಯ್ದೆ ಅಡಿಯಲ್ಲಿ ಕೃಷಿ ಸಾಲಗಳಿಗೆ ಸಂಬಂಧಿಸಿದ ಡಿಕ್ಲರೇಷನ್ ಮತ್ತು ಸಾಲ ತೀರುವಳಿ ಪತ್ರಗಳ ಫೈಲಿಂಗ್ ಮಾಡುವಿಕೆ.<br>• **ದಸ್ತಾವೇಜು ನೋಂದಣಿ ಪ್ರಕ್ರಿಯೆ:** ನಿಗಧಿತ ಸಮಯಕ್ಕೆ (Pre Booked appointment like in the passport office) ಹಾಜರಾಗಿ ಹೆಬ್ಬೆಟ್ಟು ಮತ್ತು ಭಾವಚಿತ್ರವನ್ನು ಪಡೆದು ನೋಂದಣಿ ಪ್ರಕ್ರಿಯೆಯನ್ನು 5 ರಿಂದ 10 ನಿಮಿಷಗಳಲ್ಲಿ ಮುಕ್ತಾಯ ಮಾಡಿದ ದಸ್ತಾವೇಜನ್ನು ನೋಂದಣಿ ಮಾಡಲಾಗುವುದು.<br><br>**FIFO ಆನಲೈನ್ ಮೂಲಕ** ಉಪನೋಂದಣಾಧಿಕಾರಿಗಳಿಗೆ ಸಲ್ಲಿಸಲಾಗುವ ದಸ್ತಾವೇಜಿನ ನೋಂದಣಿಗಾಗಿ ಅರ್ಜಿಗಳನ್ನು First In First out (FIFO) ಆಧಾರದ್ಲಲಿ ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ. ಮೊದಲು ಬಂದಿರುವ ಅರ್ಜಿಯನ್ನು ಪರಿಶೀಲಿಸಿದ ಮೇಲೆ ಅದರ ನಂತರ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲು ಅವಕಾಶವಿರುತ್ತದೆ.<br>• **ದಸ್ತಾವೇಜು ನೋಂದಣಿ ನಂತರ:** ನೋಂದಾಯಿಸಿರುವ ದಸ್ತಾವೇಜನ್ನು ಆನ್‌ಲೈನ್ ಮೂಲಕ ಸಂಬಂಧಪಟ್ಟ ಲಾಗಿನ್‌ಗೆ ಕಳುಹಿಸಲಾಗುವುದು.<br><br>ನೋಂದಾಯಿತ ದಸ್ತಾವೇಜನ್ನು ಡಿಜಿಟಲ್ ಲಾಕರ್ ಮೂಲಕವು ನೀಡಲಾಗುವುದು. |

| | | |
|---|---|---|
| | | • J-Slip ಮತ್ತು XML ಗಳನ್ನು ಇತರೆ ಪ್ರಾಧಿಕಾರಿಗಳಿಗೆ ಕಳುಹಿಸಿದ್ದನ್ನು ದೃಢೀಕರಿಸಿ SMS ಕಳುಹಿಸಲಾಗುವುದು.<br><br>ಸಾರ್ವಜನಿಕರು ಮುಕ್ತವಾಗಿ ಯಾವುದೇ ಅಡಚಣೆ ಇಲ್ಲದೇ ದಸ್ತಾವೇಜು ನೋಂದಣಿಯನ್ನು ಮಾಡಿಕೊಳ್ಳಲು ಅವಕಾಶವಿರುತ್ತದೆ ಹಾಗೆಯೇ ತಂತ್ರಾಂಶದ ಮೂಲಕವೇ ಬಹಳಷ್ಟು ಕೆಲಸ ಕಾರ್ಯಗಳು ನಿರ್ವಹಿಸುವ ಕಾರಣ, ನೋಂದಣಿ ಪ್ರಕ್ರಿಯೆಯಲ್ಲಿ ಲೋಪಗಳು ಆಗುವ ಸಾಧ್ಯತೆ ಕಡಿಮೆ ಇರುತ್ತದೆ.<br><br>ಪ್ರಸ್ತುತ ಆಸ್ತಿಗಳ ನೋಂದಣಿಯು ಕಾವೇರಿ 2 ತಂತ್ರಾಂಶವು ಜನಸ್ನೇಹಿ ತಂತ್ರಾಂಶವಾಗಿರುವುದರಿಂದ ಇಲ್ಲಿ ಸಾರ್ವಜನಿಕರು ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ನೋಂದಣಿ ಇಲಾಖೆಯ ಸೇವೆಗಳನ್ನು ಪಡೆಯಬಹುದಾಗಿದೆ. ನೋಂದಣಿ ಸೇವೆಗಳ ಕುರಿತು ಹೆಲ್ಪ್‌ಡೆಸ್ಕ್ ಫೋನ್ ನಂ.080 68265316 ಇ-ಮೇಲ್ ಐಡಿ helpdsr.karnataka.gov.in ಇದ್ದು ಈ ಎಲ್ಲಾ ನೋಂದಣಿ ಪ್ರಕ್ರಿಯೆಗಳನ್ನು ನಿರ್ವಹಣೆ ಮಾಡುವ ಬಗ್ಗೆ ನೋಂದಣಿ ಇಲಾಖೆಯು ಯು-ಟ್ಯೂಬ್ ಚಾನಲ್‌ಗಳನ್ನು ಪೇಸ್‌ಬುಕ್ ಟ್ವಿಟರ್ ಮುಂತಾದ ಡಿಜಿಟಲ್ ಪ್ಲಾಟ್‌ಫಾರ್ಮನಲ್ಲಿ ಇರುವುದರಿಂದ ಸಾರ್ವಜನಿಕರು ನೋಂದಣಿ ಸೇವೆಯನ್ನು ಸ್ವತಃ ಪಡೆಯಬಹುದಾಗಿದ್ದರಿಂದ ಮಧ್ಯವರ್ತಿಗಳ ಅವಶ್ಯಕತೆ ಇರುವುದಿಲ್ಲ. |

ಕಂಇ/94/ಎಂಎನ್ಎಸ್ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು